C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ ನಂ. 17/2022

ದಿನಾಂಕಃ 11.12.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ
ಸಿ. ಡಬ್ಲ್ಯೂ :3 ಪಿ. ಡಬ್ಲ್ಯೂ :4

| | |
|---|---|
| ಸಾಕ್ಷಿದಾರರ ಹೆಸರು | ಚೇತನ್ |
| ತಂದೆಯ ಹೆಸರು | ದೇವರಾಜು |
| ವಯಸ್ಸು | 22 ವರ್ಷ |
| ಉದ್ಯೋಗ | ಸೂಪರ್ ವೈಸರ್, flip cart. |
| ವಾಸ | ದೊಡ್ಡೇಗೌಡನ ಕೊಪ್ಪಲು, ನಾಗಮಂಗಲ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1) ಚಾಸಾ 1 ನನ್ನ ದೊಡ್ಡಪ್ಪನ ಮಗ. ಚಾಸಾ 2 ನನ್ನ ದೊಡ್ಡಮ್ಮ. ಚಾಸಾ.4 ಗೊತ್ತಿಲ್ಲ. ಚಾಸಾ.5 ನನ್ನ ದೊಡ್ಡಮ್ಮನ ಮಗಳು. 1 ನೇ ಆರೋಪಿ ನನ್ನ ದೊಡ್ಡಪ್ಪ, 2 ನೇ ಆರೋಪಿ ನನ್ನ ದೊಡ್ಡಮ್ಮನ ಮಗಳು, 3 ನೇ ಆರೋಪಿ ನನ್ನ ದೊಡ್ಡಮ್ಮ, 4 ನೇ ಆರೋಪಿ ನನ್ನ ದೊಡ್ಡಮ್ಮನ ಮಗ, 5 ನೇ ಆರೋಪಿ, 3 ನೇ ಆರೋಪಿಯ ತಂದೆ. ಚಾಸಾ 1 ರವರ ತಂದೆಯ ಜಮೀನುಗಳು ದೊಡ್ಡೇಗೌಡನ ಕೊಪ್ಪಲು ಗ್ರಾಮದಲ್ಲಿ ಇವೆ. ಆರೋಪಿಗಳ ವಾಸದ ಮನೆ ಮತ್ತು ಆಸ್ತಿಗಳು ದೊಡ್ಡೇಗೌಡನ ಕೊಪ್ಪಲು ಗ್ರಾಮದಲ್ಲಿ ಇವೆ. ಚಾಸಾ.1 ರವರ ತಂದೆಯ ಆಸ್ತಿಗೂ ಮತ್ತು ಆರೋಪಿಗಳ ಆಸ್ತಿಗೂ ಮಧ್ಯೆ 100 ಮೀಟರ್ ದೂರ ಇದೆ. ನಮ್ಮ ಮನೆ, ದೊಡ್ಡೇಗೌಡನ ಕೊಪ್ಪಲು ಗ್ರಾಮದಲ್ಲಿ ಇದೆ. ನಮ್ಮ ಮನೆಯಿಂದ, ಚಾಸಾ.1 ರವರ ಮನೆಗೂ ಮತ್ತು ಆರೋಪಿಗಳ ಮನೆಯ ನಡುವೆ 100 ಮೀಟರ್ ದೂರ ಇದೆ. ಚಾಸಾ 1 ರವರ ತಂದೆಗೂ ಮತ್ತು ಆರೋಪಿಗಳ ನಡುವೆ ಸಂಬಂಧ ಚೆನ್ನಾಗಿ ಇದೆ. ಚಾಸಾ.1 ಮತ್ತು ಆರೋಪಿಗಳ ನಡುವೆ ಏನು ಘಟನೆ ಆಗಿತ್ತು, ಏನು ಕೇಸು ಆಗಿದೆ ಎಂದು ಗೊತ್ತಿಲ್ಲ. ಆರೋಪಿಗಳ ಮೇಲೆ ಯಾರು ದೂರು ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ. ಕೇಸಿನ ವಿಚಾರಕ್ಕೆ ನನ್ನನ್ನು ಪೊಲೀಸರು, ಪೊಲೀಸ್ ಠಾಣೆಗೆ ಕರೆಸಿರಲಿಲ್ಲ. ನ್ಯಾಯಾಲಯದ ಮುಂದೆ ಇರುವ ಮುಮಾ.1 ಕಾಡು ಮರದ ದೊಣ್ಣೆ ಮತ್ತು ಮುಮಾ.2 ಮರದ ಹಿಡಿಕೆ ಇರುವ ಕುಡುಗೋಲನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಮು ಮಾ 1 ಮತ್ತು 2

ಯಾರ ವಸ್ತು ಎಂದು ಗೊತ್ತಿಲ್ಲ. ಪ್ರಕರಣದಲ್ಲಿ ತಿಳಿಸಲಾದ ಘಟನೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ 1 ರವರ ಕೊಟ್ಟಿಗೆಗೆ ಹೋಗಬೇಕಾದರೆ, ಆರೋಪಿತರ ಮನೆಯ ಮುಂದೆಯಿಂದ ಹಾದು ಹೋಗಬೇಕಾಗುತ್ತದೆ ಎಂದರೆ ಸರಿ. ರಂಗಸ್ವಾಮಿ ತೀರಿಕೊಂಡ ಮೇಲೆ, ಚಾಸಾ1 ಮತ್ತು ಆರೋಪಿಗಳ ನಡುವೆ ಆಸ್ತಿಯ ವಿಚಾರದಲ್ಲಿ ಜಗಳ ಮತ್ತು ಗಲಾಟೆ ಆಗಿತ್ತು ಎಂದರೆ ಸರಿಯಲ್ಲ. ಈ ವಿಚಾರದಲ್ಲಿ, ಈ ಹಿಂದೆಯೂ ಸಹ ಜಮೀನಿನಲ್ಲಿ ನೀರಿನ ಪೈಪುಗಳನ್ನು ಕತ್ತರಿಸಿದ ವಿಚಾರವಾಗಿ ಕೇಸುಗಳು ಆಗಿದ್ದು, ಚಾಸಾ 1 ಮತ್ತು ಆರೋಪಿತರ ಕುಟುಂಬಗಳ ನಡುವೆ ದ್ವೇಷ ಸಾಧಿಸುತ್ತಿದ್ದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಚಾಸಾ 1 ರವರ ಮಗ ಚೇತನ್ ಮತ್ತು ಅವರ ಕುಟುಂಬದವರು, ಆರೋಪಿಗಳ ಮನೆಯ ಮುಂದೆ ಓಡಾಡುವುದು ಆರೋಪಿತರಿಗೆ ಇಷ್ಟ ಇರಲಿಲ್ಲ, ಹಾಗೂ ಆರೋಪಿತರು ಹಲವಾರು ಬಾರಿ ಚಾಸಾ 1 ಮತ್ತು ಅವರ ಕುಟುಂಬಕ್ಕೆ ನಮ್ಮ ಮನೆಯ ಮುಂದೆ ಓಡಾಡಬೇಡಿ ಎಂದು ಹೇಳಿದ್ದ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ.

ದಿಃ 21.05.2020 ರಂದು ಸಂಜೆ 6.00 ಗಂಟೆಯಲ್ಲಿ , ನಾನು ಮನೆಯಲ್ಲಿ ಇದ್ದಾಗ, ಚಾಸಾ.1 ರವರ ದನದ ಕೊಟ್ಟಿಗೆಯಲ್ಲಿ ಗಲಾಟೆಯ ಶಬ್ದ ಕೇಳಿ, ನಾನು ಅಲ್ಲಿಗೆ ಹೋಗಿ ನೋಡಿದಾಗ ಆರೋಪಿತರೆಲ್ಲರೂ ಅಲ್ಲಿ ಇದ್ದು, ಆ ಪೈಕಿ 1 ನೇ ಆರೋಪಿಯ ಕೈಯ್ಯಲ್ಲಿ, ಮು ಮಾ 2 ಕುಡಗೋಲು, 3 ನೇ ಆರೋಪಿ ವಿದ್ಯಾ ರವರ ಕೈಯ್ಯಲ್ಲಿ, ಮು ಮಾ 1 ದೊಣ್ಣೆ ಇದ್ದು, ಎಲ್ಲರೂ ಸೇರಿ, ಚಾಸಾ 1 ರವರೊಂದಿಗೆ, ನಮ್ಮ ಮನೆಯ ಮುಂದೆ ತಿರುಗಾಡಬೇಡ ಎಂದು ಹೇಳಿದರೂ ಯಾಕೆ ತಿರುಗಾಡುತ್ತೀರ ಎಂದು ಜಗಳ ಮಾಡಿದರು ಎಂದರೆ ಸರಿಯಲ್ಲ. ಅಷ್ಟರಲ್ಲಿ ಅಲ್ಲಿಗೆ ಚಾಸಾ 1 ರವರ ತಾಯಿ ಚಾಸಾ 2 ರವರು ಬಂದಿದ್ದು, ನಾನು ಮತ್ತು ಚಾಸಾ 2 ರವರು ಸೇರಿ, ಚಾಸಾ 1 ರವರನ್ನು ಬಿಡಿಸಿ ಕರೆದುಕೊಂಡು, ಅವರ ಮನೆಯ ಬಳಿಯ ಬಂದಿದ್ದೆವು ಎಂದರೆ ಸರಿಯಲ್ಲ. ಆಗ ಆರೋಪಿತರೆಲ್ಲರೂ ಸೇರಿ, ಅವರ ಹಿಂದೆಯೇ ಮನೆಗೆ ಬಂದು, ಆ ಪೈಕಿ, 5 ನೇ ಆರೋಪಿ

ಕೃಷ್ಣೇಗೌಡರು, 1 ನೇ ಆರೋಪಿ ಕೆಂಪೇಗೌಡರಿಗೆ, ಇವನನ್ನು ಬಿಡಬೇಡಿ ಹೊಡೆದು ಸಾಯಿಸಿ, ಇವರಿದ್ದರೆ ತಾನೇ ನಿಮ್ಮ ಮನೆಯ ತಿರುಗಾಡುವುದು ಎಂದು ಕುಮ್ಮಕ್ಕು ಕೊಟ್ಟಿದ್ದು , ಆಗ 2 ನೇ ಆರೋಪಿಯು, ಮು.ಮಾ.2 ಕುಡಗೋಲಿನಿಂದ ಚಾಸಾ 1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅವರ ತಲೆಗೆ ಬಿಸೀದಾಗ ಚಾಸಾ 1 ರವರು ಕೈಯನ್ನು ಅಡ್ಡ ಮಾಡಿದ್ದು, ಅವರ ಬಲಗೈ ಹಸ್ತ ಮತ್ತು ಮುಂಗೈಗೆ ಏಟು ಬಿದ್ದು ರಕ್ತಗಾಯವಾಗಿತ್ತು ಎಂದರೆ ಗೊತ್ತಿರುವುದಿಲ್ಲ. 3 ನೇ ಆರೋಪಿ ವಿದ್ಯಾ ರವರು ಮುಮಾ 1 ದೊಣ್ಣೆ ಯಿಂದ ಚಾಸಾ 1 ರವರನ್ನು ಕೊಲೆ ಮಾಡುವ ಉದ್ದೇಶದಿಂದ ತಲೆಗೆ ಬೀಸಿದ್ದು, ಅವರು ಕೆಳಕ್ಕೆ ಕುಳಿತುಕೊಂಡು ತಪ್ಪಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಂತರದಲ್ಲಿ ಆರೋಪಿ ವಿಜಯಲಕ್ಷ್ಮಿ ರವರು ಚಾಸಾ.1 ರವರಿಗೆ ಕಾಲಿಂದ ತುಳಿದಿದ್ದು, ಆರೋಪಿ ವಿನಯ್ ಕುಮಾರ್ ರವರು ಸೂಳೆ ಮಗನೇ, ನಿಮ್ಮಪ್ಪನಿಗೆ ಹುಟ್ಟಿದ್ದರೆ ಈಗ ಬಂದು ತಿರುಗಾಡು ಕೊಚ್ಚಿ ಹಾಕುತ್ತೀನಿ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಗೊತ್ತಿಲ್ಲ. ಅಷ್ಟರಲ್ಲಿ ಅಲ್ಲೇ ಇದ್ದ ನಾನು, ತನಿಷಾ ಚಾಸಾ ಚಾಸಾ 1 ರವರ ತಂದೆ ರಂಗಸ್ವಾಮಿ, ಚೈತ್ರ ಬಂದು ಜಗಳ ಬಿಡಿಸಿದ್ದು, ಆರೋಪಿತರ ಕೈಯ್ಯಲ್ಲಿ ಇದ್ದ ಮು ಮಾ 1 ಮತ್ತು 2 ನ್ನು ಕಿತ್ತು ಕೊಂಡರು ಎಂದರೆ ಗೊತ್ತಿಲ್ಲ.

ನಂತರ ಆರೋಪಿತರು ಹೋಗುವಾಗ ಇವತ್ತು ಗೆದ್ದು ಹೋದೆ, ಮುಂದೆ ನಮ್ಮ ಮನೆ ಮುಂದೆ ತಿರುಗಾಡು, ಅಲ್ಲೆ ಕತ್ತರಿಸಿ ಹೂತು ಹಾಕುತ್ತೇವೆ ಎಂದು ಬೆದರಿಸಿದರು ಎಂದರೆ ಗೊತ್ತಿಲ್ಲ.

ನಂತರ ಚಾಸಾ 1 ರವರನ್ನು ನಾನು ಮತ್ತು ಚಾಸಾ 4 ರವರು ಎ.ಸಿ. ಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದೆವು ಎಂದರೆ ಸರಿಯಲ್ಲ.

ದಿಃ 23.05.2020 ರಂದು ಪೊಲೀಸರು ನನ್ನನ್ನು ಘಟನೆಯ ಸಂಬಂಧ ವಿಚಾರಣೆ ಮಾಡಿದಾಗ, ಪ್ರಕರಣದ ಪ್ರತ್ಯಕ್ಷ ಸಾಕ್ಷಿಯಾಗಿ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ.2 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬ, ಆರೋಪಿ ಕುಟುಂಬ ಮತ್ತು ಚಾಸಾ 1 ರವರ ಕುಟುಂಬದಲ್ಲಿ ಆಸ್ತಿ ವಿಭಾಗ ಆಗಿದೆ. ಆಸ್ತಿ ಪಾಲಾಗಿದ್ದ ವಿಚಾರದಲ್ಲಿ, ಚಾಸಾ 1 ರವರ ತಂದೆಗೆ ಮತ್ತು ಆರೋಪಿತರಿಗೆ ಅಸಮದಾನವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆಸ್ತಿ ಪಾಲಿನ ವಿಚಾರದಲ್ಲಿ ನಮ್ಮ ಮತ್ತು ಆರೋಪಿತರ ಕುಟುಂಬಲ್ಲಿ ಸಮಾಧಾನವಿದ್ದು ಮತ್ತು ಚಾಸಾ 1 ರವರ ಕುಟುಂಬಕ್ಕೆ ಅಸಮಾದಾನ, ಬಿನ್ನಾಭಿಪ್ರಾಯ ಇದ್ದುದರಿಂದ, ನಾನು ಚಾಸಾ 1 ರವರ ಕುಟುಂಬದ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.